ಹೋರಾಟದ ಬದುಕನ್ನು ನಡೆಸಿದವಳು. ಈಕೆಯ ಬದುಕಿಗೆ ವಿಶೇಷ ಮನ್ನಣೆ ಇದೆ. ಈ ದೈವದ ವೇಷಭೂಷಣ, ಬಣ್ಣಗಾರಿಕೆ, ನೃತ್ಯ, ಮಾತುಗಳು, ದೈವಿಕ ದರ್ಶನ ವಿಭಿನ್ನವಾದುದು. ಗಂಡಾಳ್ವಿಕೆಗೆ ಒಳಗಾದ ಪ್ರತಿ ಹೆಣ್ಣಿನ ಅಸ್ಮಿತೆಯ ಸಂಕೇತವಾಗಿ ಉಳ್ಳಾಲ್ತಿ ದೈವ ಕಾಣಿಸುತ್ತದೆ. ಈ ದೈವದ ಬಗ್ಗೆ ಇರುವ ಹಲವು ಪಠ್ಯಗಳು ಮತ್ತು ಐತಿಹ್ಯಗಳನ್ನು ಪರಿಶೀಲಿಸಿದ್ದಾರೆ. 'ಮಹಿಳಾ ಸಮುದಾಯವು ತನ್ನ ಬದುಕಿಗಾಗಿ ನಡೆಸಿದ ಹೋರಾಟದ ಸಂಕೇತವಾಗಿ ಉಳ್ಳಾಲ್ತಿ ದೈವ ಪ್ರಾತಿನಿಧಿಕವಾಗಿ ಬರುತ್ತಾಳೆ' ಎನ್ನುತ್ತಾರೆ.

'ಹೊಸ ತುಳು ಕಾವ್ಯ', 'ಹಾದಿ ಮತ್ತು ತಿರುವು' ಲೇಖನದಲ್ಲಿ ತುಳುಕಾವ್ಯ ತುಳಿಯುತ್ತಿರುವ ಹಾದಿಯನ್ನು ಗುರುತಿಸಿದ್ದಾರೆ. ಜೊತೆಗೆ ತುಳು ಕಾವ್ಯ ಪರಂಪರೆ ಮತ್ತು ಹಿರಿಯ ತುಳು ಕವಿಗಳ ಕೊಡುಗೆಯನ್ನು ಗುರುತಿಸಿದ್ದಾರೆ. ಹೊಸ ತುಳು ಕಾವ್ಯ ಸಮಾಜವನ್ನು ಕಟ್ಟುವಲ್ಲಿ ಹೊಸಬರ ಕವಿತೆಗಳು ತುಡಿಯುತ್ತಿವೆ ಎನ್ನುತ್ತಾರೆ. ನೂರಕ್ಕೂ ಹೆಚ್ಚು ಕವನ ಸಂಗ್ರಹಗಳನ್ನು ಸಂಗ್ರಹಿಸಿ ಪಟ್ಟಿ ಕೊಟ್ಟಿದ್ದಾರೆ. ತುಳು ಕಾವ್ಯ ಚರಿತ್ರೆ ಬರೆಯುವವರಿಗೆ ಈ ಸಂಗ್ರಹ ಮುಖ್ಯ ಆಕರವಾಗಿದೆ. ಈ ಕಾವ್ಯಗಳ ಭಾಷಿಕ ಲಯ ಯಾವುದು ಎಂಬುದರ ಕಡೆ ಗಮನಹರಿಸಿದ್ದರೆ ಒಳ್ಳೆಯದಿತ್ತು.

'ತಿಳಿ ಹೇಳುವ ತುಳು ಕಥೆಗಳು' ಲೇಖನದಲ್ಲಿ ತುಳು ನಾಡಿನ ಗದ್ಯದ ವಿಕಾಸವನ್ನು ಗುರುತಿಸಿದ್ದಾರೆ. ತುಳು ಭಾಷೆಯಲ್ಲಿ ಬರೆದ ಕಥೆಗಳನ್ನು ವಿಶ್ಲೇಷಿಸಿದ್ದಾರೆ. ಆಧುನಿಕ ಕಾಲಘಟ್ಟದಲ್ಲಿ ಕಥೆಗಳನ್ನು ಬರೆದ ಲೇಖಕರು ಸಮಾಜದ ಅನ್ಯಾಯ, ಮೋಸ, ಅಸಮಾನತೆಯ ಶೋಷಣೆ, ಹಿಂಸೆ – ಇವುಗಳ ವಿರುದ್ಧ ಪ್ರತಿಭಟನೆಗೆ ಧ್ವನಿ ಎತ್ತಿದ್ದಾರೆ. ಸಮಾಜದಲ್ಲಿ ಬದಲಾವಣೆಗಳನ್ನು ತರುವ ಅಗತ್ಯವಿದೆ ಎಂಬ ಸಂದೇಶವನ್ನು ಪ್ರಬಲವಾಗಿ ಸಾರಿದ್ದಾರೆ ಎಂಬ ಅಂಶವನ್ನು ಈ ಕಥೆಗಳ ಮೂಲಕ ಮನಗಾಣಿಸಿದ್ದಾರೆ. ತುಳು ಕಥೆಗಳ ಸ್ವರೂಪವನ್ನು ಕುರಿತು ಅಧ್ಯಯನ ಮಾಡುವವರಿಗೆ ಈ ಲೇಖನ ಅಭ್ಯಾಸ ಯೋಗ್ಯವಾಗಿದೆ.

'ಅನುವಾದ ತುಳು ತಲೆಯೆತ್ತಿ ನಿಲ್ಲುವ ಬಗೆ' ಲೇಖನವು ಪ್ರಾದೇಶಿಕ ಭಾಷೆ ಎಂದು ಜಾಗತಿಕ ಭಾಷೆಗೆ ಅನುವಾದಗೊಳ್ಳುವ ಬಿಕ್ಕಟ್ಟಿನ ಬಗೆಯನ್ನು ಶೋಧಿಸುತ್ತದೆ. ತುಳು ಕಾವ್ಯಗಳನ್ನು ಇಂಗ್ಲಿಷ್ ಅನುವಾದಿಸಿದ ಇವರು ತಮ್ಮ ಅನುಭವಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ. ತುಳುವಿನಂತಹ ಭಾಷೆಗಳನ್ನು ಇಂಗ್ಲೀಷ್‌ಗೆ ಅನುವಾದ ಮಾಡಲು ತೊಡಗಿಕೊಳ್ಳುವವರಿಗೆ ಇದೊಂದು ಉಪಯುಕ್ತ ಲೇಖನವಾಗಿದೆ.

'ಯಕ್ಷಗಾನ ಪ್ರದರ್ಶನ ಇತಿಹಾಸ ಕಟ್ಟುವ ಕಷ್ಟದ ಕೆಲಸ' ಲೇಖನವು ಯಕ್ಷಗಾನದ ಇತಿಹಾಸವನ್ನು ಬರೆಯಲು ಪ್ರಯತ್ನಿಸಿದೆ. ಇದು ಪಾಂಡಿತ್ಯಪೂರ್ಣವಾದ ಲೇಖನ. ಇಲ್ಲಿವರೆಗೆ ಯಕ್ಷಗಾನದ ಮೇಲೆ ಬಂದ ಎಲ್ಲಾ ಪುಸ್ತಕಗಳನ್ನು ಪರಿಶೀಲಿಸಿ, ಯಕ್ಷಗಾನ ಇತಿಹಾಸವನ್ನು ದಾಖಲಿಸಿದ್ದಾರೆ. ಯಕ್ಷಗಾನ ಬೆಳೆದುಬಂದ ಕಾಲಘಟ್ಟವನ್ನು ಗುರುತಿಸಿ, ಅದರ ಸ್ಥಿತ್ಯಂತರಗಳನ್ನು ಗುರುತಿಸಿದ್ದಾರೆ. 'ಒಂದು ಅಂದಾಜಿನ ಪ್ರಕಾರ ಐವತ್ತರಷ್ಟು ಸಂಶೋಧನಾ ಪ್ರಬಂಧಗಳು, ಐದುನೂರಕ್ಕಿಂತ ಹೆಚ್ಚು ಮೌಲಿಕ ಅಧ್ಯಯನ ಗ್ರಂಥಗಳು ಪ್ರಕಟವಾಗಿವೆ. ಸಾವಿರಕ್ಕಿಂತ ಹೆಚ್ಚು ಪ್ರಸಂಗಗಳು ಸಂಪಾದನೆಯಾಗಿದೆ. ಯಕ್ಷಗಾನ ಸಾಹಿತ್ಯ ಚರಿತ್ರೆ ರಚನೆಯಾಗಿದೆ. ಸಾಂಸ್ಕೃತಿಕ ಪದಕೋಶ ನಿರ್ಮಾಣವಾಗಿದೆ. ಯಕ್ಷಗಾನ ನಮ್ಮ ನಾಡಿನ ಕಲೆ, ಮಣ್ಣಿನ ಕಲೆ, ರಾಜ್ಯ ಮತ್ತು ರಾಷ್ಟ್ರದ ಕಲೆ, ದೇಶದ ಪ್ರಾತಿನಿಧಿಕ ಪರಿಪೂರ್ಣ ರಂಗಭೂಮಿ ಎಂಬ ಹೆಗ್ಗಳಿಕೆಯನ್ನು ಪಡೆದುಕೊಂಡಿದೆ. ಕಳೆದ ನೂರು ವರ್ಷಗಳಲ್ಲಿ ಯಕ್ಷಗಾನ ಪರಂಪರೆ ಅಧ್ಯಯನ ಮತ್ತು ಸಾಂಸ್ಕೃತಿಕ ಇತಿಹಾಸದ ರಚನೆ ಕೆಲಸಗಳು ನಡೆದಿರುವುದರಿಂದ ಈ ಮನ್ನಣೆಯನ್ನು ಪಡೆಯಲು ಸಾಧ್ಯವಾಗಿದೆ' ಎಂದು ಹೇಳುತ್ತಾರೆ. ಇಷ್ಟಾಗಿಯೂ ಕ್ರಮಬದ್ಧವಾಗಿ ಯಕ್ಷಗಾನದ ಸಾಂಸ್ಕೃತಿಕ ಚರಿತ್ರೆಯನ್ನು ಬರೆಯಬೇಕಾದ ಅಗತ್ಯವಿದೆ ಎನ್ನುತ್ತಾರೆ.

ಈ ಕೃತಿಯ ಎಲ್ಲಾ ಲೇಖನಗಳು ಮುಂದಿನ ಅಧ್ಯಯನಕಾರರಿಗೆ ಮಾದರಿಯೊಂದನ್ನು ಹಾಕಿಕೊಟ್ಟಿವೆ. ಜನರು ಸೃಜಿಸಿದ ಪಠ್ಯಗಳನ್ನು 'ಸಾಂಸ್ಕೃತಿಕ ಪಠ್ಯ'ಗಳೆಂದು ಪರಿಗಣಿಸಿ, ಅವುಗಳ ಸಂಗ್ರಹ, ವರ್ಗೀಕರಣ, ವಿಶ್ಲೇಷಣೆ, ಸ್ಪಷ್ಟವಾದ ದೃಷ್ಟಿಕೋನ ಲೇಖನಗಳ ಸತ್ವವನ್ನು ಹೆಚ್ಚಿಸಿವೆ. ಈ ಎಂಟು ಲೇಖನಗಳು ಚಿನ್ನಪ್ಪ ಗೌಡರ ಆಳವಾದ ವಿದ್ವತ್ತನ್ನು ಮುಂದಿಡುತ್ತವೆ.

●